# ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಸ್ವಾಮಿ ಜಗದಾತ್ಮಾನಂದಜಿ ಅವರ ಕೊಡುಗೆ

**ಸ್ವಾಮಿ ಬೋಧಸ್ವರೂಪಾನಂದ**

'ಬದುಕಲು ಕಲಿಯಿರಿ' ಎಂಬ ಗ್ರಂಥದ ಮೂಲಕ ಮನೆಮಾತಾಗಿರುವ ಸ್ವಾಮಿ ಜಗದಾತ್ಮಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಭಾವಧಾರೆ ಕರ್ನಾಟಕದಲ್ಲಿ ವ್ಯಾಪಕಗೊಳ್ಳಲು ದುಡಿದ ಒಬ್ಬ ಪ್ರಮುಖ ಸಂನ್ಯಾಸಿಯಾಗಿದ್ದಾರೆ. ಅವರ ಪುಸ್ತಕ, ಪ್ರವಚನ ಹಾಗೂ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ದಿವ್ಯತ್ರಯರಲ್ಲಿ ಆಶ್ರಯ ಪಡೆದ ಜನರು ಅನೇಕ. ಅವರ ಜೀವನ, ಸಾಧನೆಗಳ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರಿನ ಹಲಸೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಉತ್ತಮ ಭಾಷಣಕಾರರೂ ಲೇಖಕರೂ ಆಗಿದ್ದಾರೆ.

ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಅಂದರೆ ನಾವು ಅಂದುಕೊಂಡಂತೆ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ಮತ್ತು ಸ್ವಾಮಿ ವಿವೇಕಾನಂದರ ಕುರಿತು ವಿವಿಧ ಕಾರ್ಯಾಗಾರ ಏರ್ಪಡಿಸುವುದು, ಅವರನ್ನು ಕುರಿತು ಭಾಷಣ ಮಾಡುವುದು ಎಂಬುದಾಗಿ. ಆದರೆ ರಾಮಕೃಷ್ಣ ಮಹಾಸಂಘದ ಹಿರಿಯ ಸ್ವಾಮೀಜಿಗಳು ಎನ್ನುವಂತೆ, ಪ್ರಚಾರ ಮಾಡುವ ಮೊದಲು ನಮ್ಮ ಭಾವಶುದ್ಧಿ ಆಗಬೇಕು. ಇದಕ್ಕೆ ಜೀವಮಾನದುದ್ದಕ್ಕೂ ಸಾಧನೆ ನಮ್ಮ ಜೀವನದ ಅಂಗವಾಗಬೇಕು.


ನಮ್ಮ ಋಷಿಗಳು ಆಚಾರ್ಯರು ಉಪದೇಶಗಳಲ್ಲಿ ಹೇಳಿರುವಂತೆ **ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್** – ಸ್ವಾಧ್ಯಾಯ ಮತ್ತು ಪ್ರವಚನಗಳನ್ನು ನಾವು ನಿರ್ಲಕ್ಷಿಸಬಾರದು. ಅಂದರೆ ಸ್ವಾಧ್ಯಾಯ ಪ್ರವಚನಗಳನ್ನು ನಮ್ಮ ಜೀವನದ ಅಂಗವಾಗಿ ಮಾಡಿಕೊಳ್ಳಬೇಕು. ಇಂತಹ ಜೀವನವನ್ನು ಪರಮ ಪೂಜ್ಯ ಸ್ವಾಮಿ ಜಗದಾತ್ಮಾನಂದಜಿ ಅವರು ತಮ್ಮ ಜೀವನದಲ್ಲಿ ನಡೆದು ನಮಗೆ ಎಲ್ಲರಿಗೂ ಕೂಡ ಮಾದರಿಯಾಗಿದ್ದಾರೆ.



ಕರಾವಳಿ ಪ್ರದೇಶದ ಭಾಗವತ ಸಂಪ್ರದಾಯಸ್ಥ ಭಕ್ತರ ಶ್ರದ್ಧಾಕೇಂದ್ರ ಬಾಳೆಕುದ್ರು ಗ್ರಾಮ. ಅಲ್ಲಿ ಶ್ರೀ ಶಂಕರ ಭಗವತ್ಪಾದರ ಶಿಷ್ಯರಿಂದ ಆರಂಭವಾದ ಮಠದಲ್ಲಿ ಶ್ರೀ ನರಸಿಂಹ ಸ್ವಾಮಿ ಆರಾಧ್ಯ ದೇವತೆ; ಸೀತಾನದಿ, ಸುವರ್ಣ ನದಿಗಳು ಸಂಗಮಿಸಿ ಉತ್ತರಾಭಿಮುಖವಾಗಿ ಹರಿದು ಪಶ್ಚಿಮ ಅರಬ್ಬಿ ಸಮುದ್ರವನ್ನು ಸೇರುವ ಪವಿತ್ರ ಸಂಗಮ ಕ್ಷೇತ್ರವಿದು. ನೈಸರ್ಗಿಕ ಬಂದರು. ಸಂಗಮೇಶ್ವರ ದೇವಾಲಯ ಕೂಡ ಇಲ್ಲಿದೆ. ಇಂತಹ ಪವಿತ್ರ ಕ್ಷೇತ್ರದಲ್ಲಿ ವೇದಮೂರ್ತಿಗಳೂ, ನಿಷ್ಠಾವಂತ ಪುರೋಹಿತರೂ, ಸಂಸ್ಕೃತ ಭಾಷಾ ವಿದ್ವಾಂಸರೂ, ಪ್ರಖರ ವಾಗ್ಮಿಗಳೂ ಆಗಿದ್ದಂತಹ ಶ್ರೀ ಶ್ರೀನಿವಾಸ ಕೆದಿಲಾಯ ಅವರ ಹಿರಿಯ ಪುತ್ರನಾಗಿ ಜನಿಸಿದವರೇ ಶ್ರೀ ಲಕ್ಷ್ಮೀನಾರಾಯಣ ಕೆದಿಲಾಯ; ಮುಂದೆ ರಾಮಕೃಷ್ಣ ಮಹಾಸಂಘದಲ್ಲಿ ಸ್ವಾಮಿ ಜಗದಾತ್ಮಾನಂದರೆಂದು ಖ್ಯಾತನಾಮರಾಗಿ, ರಾಮಕೃಷ್ಣ ಮಹಾಸಂಘದಲ್ಲಿ ಹಿರಿಯ ಸಂನ್ಯಾಸಿಗಳಾಗಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಸೌಮ್ಯ ಸ್ವಭಾವದ, ಎದುರು ಉತ್ತರ ಕೊಡದ, ವಿದ್ಯೆಯನ್ನು ಚೆನ್ನಾಗಿ ಕಲಿಯುತ್ತಿದ್ದ ಈ ಬಾಲಕ. ಆದರೆ ಪ್ರಕಾಂಡ ಪಂಡಿತರಾಗಿದ್ದ ತಂದೆಯವರಿಗೆ ಮಗನು ಇನ್ನಷ್ಟು ಚುರುಕಾಗಿ ಹೆಚ್ಚು ಹೆಚ್ಚು ವಿಷಯಗಳನ್ನು ಬೇಗ ಬೇಗ ತಿಳಿದುಕೊಳ್ಳಲಿ, ಶೀಘ್ರವೇ ಮುಂದೆ ಬರಲಿ ಎಂಬ ತೀವ್ರ ನಿರೀಕ್ಷೆ ಇರುತ್ತಿತ್ತು. ಹೀಗಾಗಿ ತಂದೆಯವರು ವ್ಯಕ್ತಪಡಿಸುತ್ತಿದ್ದ ತೀಕ್ಷ್ಣ ಅಭಿಪ್ರಾಯಗಳು ಪುಟ್ಟ ಬಾಲಕನ ಮನದ ಮೇಲೆ ಭಯದ ಕಾರಣ, ಕೀಳರಿಮೆಯ ಭಾವವನ್ನು ಬೆಳೆಸಿತು. ಇದು ಮುಂದೆ ವ್ಯಕ್ತಿತ್ವ ವಿಕಸನದ ಕನ್ನಡದ ಪ್ರಪ್ರಥಮ ಗ್ರಂಥ ಮೇರುಕೃತಿಯಾಗಿರುವ 'ಬದುಕಲು ಕಲಿಯಿರಿ' ಗ್ರಂಥ ರಚನೆಗೆ ನಾಂದಿಯಾಯಿತು. ಈ ರೀತಿ ಕೀಳರಿಮೆ ಬೇರೆ ಮಕ್ಕಳಿಗೆ ಉಂಟಾಗದಿರುವಂತೆ ಪ್ರೇರಣೆಯ ಶಕ್ತಿ ಸಂಜೀವಿನಿಯಾಗಿ ನಿರಂತರ ಲಕ್ಷಾಂತರ ಜನರನ್ನು ಸತ್ಪಥದಲ್ಲಿ ನಡೆಸುವಂತೆ ಮಾಡುತ್ತಿದೆ ಈ ಗ್ರಂಥ. ಜೊತೆಗೆ, ಬೈದು ಬಗ್ಗಿಸುವ ಬದಲಿಗೆ ತಾಳ್ಮೆ, ಸಮಾಧಾನದಿಂದ ಬುದ್ಧಿ ಹೇಳುತ್ತಿದ್ದ ತಾಯಿ ಶ್ರೀದೇವಿ ಅಮ್ಮನವರ ರೀತಿಯಲ್ಲಿ ತನ್ನ ಬಳಿಗೆ ಬಂದ ಅಸಂಖ್ಯಾತ ನರ ನಾರಿಯರಿಗೆ ಸಾಂತ್ವನ ನೀಡಿ ಬದುಕಿನಲ್ಲಿ ಭರವಸೆಯನ್ನುಂಟುಮಾಡಿ, ಅವರ ಜೀವನಕ್ಕೆ ಬೆಳಕನ್ನು ನೀಡಿರುತ್ತದೆ, 'ಬದುಕಲು ಕಲಿಯಿರಿ' ಗ್ರಂಥ. ಇದರ ನಾಲ್ಕು ಲಕ್ಷಕ್ಕೂ ಹೆಚ್ಚು ಪ್ರತಿಗಳು

ಮಾರಾಟಗೊಂಡು, ಹನ್ನೊಂದು ಭಾಷೆಗಳಿಗೆ ತರ್ಜುಮೆಗೊಂಡು, ಜನಮಾನಸದಲ್ಲಿ ಧರ್ಮ, ಅಧ್ಯಾತ್ಮಗಳ ಜೀವ, ಜಗತ್ತು ಮತ್ತು ಜಗನ್ನಿಯಾಮಕನ ಬಗ್ಗೆ, ದಿವ್ಯತ್ರಯರ ಮಹಿಮೆಯನ್ನು ಸಾರುವ ಕೆಲಸ ಮಾಡುತ್ತಿದೆ. ಇದು ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರಕ್ಕೆ ಜಗದಾತ್ಮಾನಂದರ ವಿಶಿಷ್ಟ ಕೊಡುಗೆ. 'ಬದುಕಲು ಕಲಿಯಿರಿ' ಮೂಲಕ ಅಸಂಖ್ಯಾತ ಮಂದಿ ದಿವ್ಯತ್ರಯರ ಜೀವನ ಸಂದೇಶವನ್ನು ಓದಿ ತಮ್ಮ ಬಾಳಿನ ಗುರಿಯನ್ನು ಕಂಡುಕೊಂಡಿದ್ದಾರೆ.

ಸ್ವಾಮಿ ಜಗದಾತ್ಮಾನಂದಜಿ ಅವರು ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್‌ನಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರದ ಒಂದು ಶ್ರೇಷ್ಠ ಶಿಖರವಾಗಿದ್ದು, ತಮ್ಮ ಜೀವನವನ್ನು ರಾಮಕೃಷ್ಣ-ವಿವೇಕಾನಂದ ತತ್ತ್ವಗಳ ಪ್ರಸಾರ ಮತ್ತು ಸೇವೆಗಾಗಿ ಅರ್ಪಿಸಿದ್ದಾರೆ. ಅವರ ಶ್ರದ್ಧಾಭಕ್ತಿಯಿಂದ ಕೂಡಿದ ತತ್ತ್ವ ಬೋಧನೆಗಳು, ಬರಹಗಳು ತಮ್ಮ ಓದುಗರಿಗೆ ಮತ್ತು ಶ್ರೋತೃಗಳ ಹೃದಯಕ್ಕೆ ಸ್ಪಂದಿಸಿದ್ದು ನಿಜವಾದ ಆಧ್ಯಾತ್ಮಿಕ ಜಾಗೃತಿಯನ್ನು ನೀಡಲು ನೆರವಾಗಿವೆ. ಅವರು ತಮ್ಮ ಬೋಧನೆಗಳಲ್ಲಿ ಶ್ರೀರಾಮಕೃಷ್ಣರ ಅಸಾಮಾನ್ಯ ಜೀವನ ತತ್ತ್ವಗಳ ಮಹತ್ವವನ್ನು ಜನರಿಗೆ ತಲುಪಿಸಲು ಪ್ರಾಮುಖ್ಯತೆ ನೀಡಿದರು. ಶ್ರೀರಾಮಕೃಷ್ಣರು ತಾವು ಅನುಭವದಿಂದ ಕಂಡುಕೊಂಡ ಆಧ್ಯಾತ್ಮಿಕ ಸತ್ಯಗಳನ್ನು ಸಾಮಾನ್ಯ ಜನರಿಗೂ ತಲುಪಿಸಲು ಅವರು ಮಾಡಿದ ಪ್ರಯತ್ನಗಳು ಅನೇಕ. ಜಗದಾತ್ಮಾನಂದಜಿಯವರ ಭಾಷಣಗಳಲ್ಲಿ ರಾಮಕೃಷ್ಣರ ಅನುಭೂತಿ ಮತ್ತು ಭಕ್ತಿ ಹೇಗೆ ಪ್ರತಿಬಿಂಬಿಸುತ್ತಿತ್ತೋ ಹಾಗೆ ಜನರ ಆತ್ಮದಲ್ಲಿ ನಂಬಿಕೆ, ಭಕ್ತಿ ಮತ್ತು ಶ್ರದ್ಧೆಯನ್ನು ಮೂಡಿಸಲು ಪ್ರೇರಣೆ ಕೊಡುತ್ತಿತ್ತು- ವಿಶೇಷವಾಗಿ ಯುವಜನರ ಜೀವನದಲ್ಲಿ; ಸ್ವಾಮಿ ವಿವೇಕಾನಂದರ ದಿವ್ಯ ಸಂದೇಶಗಳನ್ನು ಹೇಳುತ್ತಾ ಅವರು ಸತ್ಪ್ರಜೆಗಳಾಗಿ ಬೆಳೆಯುವಂತೆ ಮಾರ್ಗದರ್ಶನ ನೀಡುತ್ತಿತ್ತು. ಅವರು ತಮ್ಮ ಪ್ರಖರ ಭಾಷಣಗಳಿಂದ ಯುವಜನರು ತಮ್ಮ ಜೀವನದ ಉದ್ದೇಶ ಮತ್ತು ಆದರ್ಶಗಳನ್ನು ಅವಲೋಕಿಸಲು ಪ್ರೇರಣೆ ನೀಡುತ್ತಿದ್ದರು ಮತ್ತು ಶಕ್ತಿಯ ಆಧಾರವಾಗಿದ್ದ ದೇಶಸೇವೆಗೆ ಮಾನವೀಯ ಅಭಿವೃದ್ಧಿಗೆ ಯುವಕರು ಬರುವಂತೆ ಮಾಡುತ್ತಿದ್ದರು. ಪೂಜ್ಯ ಸ್ವಾಮೀಜಿಯವರು ವಿದ್ಯಾರ್ಥಿಗಳಿಗೆ ಅಲ್ಲದೆ ಪೋಷಕರಿಗೂ ಶಿಕ್ಷಕರಿಗೂ ಕೂಡ ಮಾರ್ಗದರ್ಶಕರಾಗಿದ್ದರು. ಅಧ್ಯಾತ್ಮಿಕ, ನೈತಿಕ ಮತ್ತು ಮಾನವೀಯ ಮೌಲ್ಯಗಳ ಬೋಧನೆಗಳನ್ನು, ಶಾಲಾ ಕಾಲೇಜು ಮಟ್ಟದಲ್ಲಿ ತಮ್ಮ ಉಪನ್ಯಾಸಗಳ ಮೂಲಕ ಹಂಚಿದರು. ಮಕ್ಕಳಲ್ಲಿ ಆತ್ಮವಿಶ್ವಾಸ, ಸತ್ ಪ್ರಜ್ಞೆ, ದಯೆ, ಧರ್ಮಗಳ ಗುಣಗಳನ್ನು ಬೆಳೆಸುವ ಬೋಧನೆಗಳನ್ನು ಪ್ರಾಥಮಿಕ ಶಿಕ್ಷಣದಿಂದಲೇ, ಮಕ್ಕಳಿಗೆ ಉತ್ತಮ ಎನ್ನುವುದನ್ನು ಬಳಸಲು ಮಾದರಿ ಆಗುತ್ತದೆ ಎಂಬುದನ್ನು ಪೋಷಕರಿಗೆ ಒತ್ತಿ ಹೇಳುತ್ತಿದ್ದರು. ಅವರ ಅವಿಸ್ಮರಣೀಯ ಕೊಡುಗೆಗಳು, ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಸೇವೆಗೆ ಮಹಾ ಆದರ್ಶವಾಗಿವೆ. ಅವರ ತತ್ತ್ವ ಪ್ರಚಾರ, ಸೇವಾ ಭಾವನೆ ಮತ್ತು ಶುದ್ಧಶೀಲ ಚಟುವಟಿಕೆಗಳು ಇಂದಿಗೂ ನಮ್ಮ ಮನಸ್ಸನ್ನು ಭಾವುಕರಾಗಿಸುತ್ತವೆ.




ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದರ ಭಾವಧಾರೆಗೆ ಜಗದಾತ್ಮಾನಂದಜಿಯವರ ಕೊಡುಗೆಯನ್ನು ನಾವು ಕೆಳಕಂಡಂತೆ ಅರ್ಥೈಸಬಹುದು.

**೧. ತಮ್ಮ ಸತ್ಸಂಗದ ಮೂಲಕ:** ನಿರಂತರ ಸಾಧನೆಯ ಮೂಲಕ ತಮ್ಮ ಜೀವನವನ್ನು ರಾಮಕೃಷ್ಣ ವಿವೇಕಾನಂದರಲ್ಲಿ ಸಮರ್ಪಿಸಿಕೊಂಡಿದ್ದಾರೆ. ಅವರ ಅಧ್ಯಯನಶೀಲತೆ – ಅಂದರೆ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ, ಸ್ವಾಮಿ ವಿವೇಕಾನಂದರ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದವರಾಗಿದ್ದರು. ಅವರು ಹಾಗಾಗಿ ತಮ್ಮ ಬಳಿಗೆ ಬಂದಂತಹ ಆಧ್ಯಾತ್ಮಿಕ ಪಿಪಾಸುಗಳಿಗೆ ತಮ್ಮ ಅಧ್ಯಯನದಿಂದ, ಸಾಧನೆಯಿಂದ ಲಭ್ಯವಾದ ಮಾತುಗಳಿಂದ ಸಹಾಯ ಮಾಡುತ್ತಿದ್ದರು. ಅಂತಹವರು ಎಷ್ಟೋ ಮಂದಿ ದೂರದ ಊರಿನಿಂದ ಅವರ ಬಳಿಗೆ ಬರುತ್ತಿದ್ದರು. ಅವರ ಸತ್ಸಂಗದಿಂದ ಪ್ರಭಾವಿತರಾದ ಎಷ್ಟೋ ಜನ ಈ ಜಗತ್ತಿನಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುವುದರ ಜೊತೆಗೆ ಸಾಧನೆಯನ್ನು ಮಾಡಿದ್ದಾರೆ. ಮತ್ತಷ್ಟು ಜನರು ಸಂನ್ಯಾಸ ಜೀವನವನ್ನು ಸ್ವೀಕರಿಸಿದ್ದಾರೆ. ಯುವಕರೊಡನೆ ಬೆರೆತು ಯುವಕರೇ ಆಗಿ ಅವರ ಸಮಸ್ಯೆಗಳನ್ನು ಅರಿತು ಅವರಿಗೆ ಮಾರ್ಗದರ್ಶನ ಮಾಡುತ್ತಿದ್ದುದು ಮತ್ತು ಅವರನ್ನು ದಿವ್ಯತ್ರಯರೆಡೆಗೆ ಬರುವಂತೆ ಮಾಡುತ್ತಿದ್ದುದು, ಜಗದಾತ್ಮಾನಂದಜಿಯವರ ಒಂದು ವಿಶೇಷತೆ. ಹಾಗಾಗಿ ಸಹಸ್ರಾರು ಮಂದಿ ಅವರಿಂದ ಪ್ರಭಾ

ವಿತರಾಗಿ ಆಧ್ಯಾತ್ಮಿಕ ಜೀವನ ನಡೆಸಲು ಪಾದಾರ್ಪಣೆ ಮಾಡುವಂತಾಯಿತು. ಅದರಲ್ಲೂ ಹಲವರು ಸಂಸಾರ ಜೀವನವನ್ನು ತ್ಯಜಿಸಿ ಸಂನ್ಯಾಸ ಜೀವನ ನಡೆಸಲು ರಾಮಕೃಷ್ಣ ಮಹಾಸಂಘವನ್ನು ಸೇರುವಂತೆ ಮಾಡಿತು. ಅವರಲ್ಲಿ ಅನೇಕರು ಮಹಾ ಸಂಘದಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿದ್ದಾರೆ. ಸ್ವಾಮಿ ಸುನಿರ್ಮಲಾನಂದಜಿ, ಸ್ವಾಮಿ ಸತ್ಯೇಶಾನಂದಜಿ, ಸ್ವಾಮಿ ಬೋಧಸ್ವರೂಪಾನಂದಜಿ ಹಾಗೂ ಇನ್ನೂ ಹಲವರು ಅವರ ಸತ್ಸಂಗದಿಂದ ಪ್ರೇರಿತರಾಗಿ ಉತ್ತಮ ಜೀವನವನ್ನು ನಡೆಸುತ್ತಾ ಇರುವುದನ್ನು ನಾವು ಕಾಣುತ್ತೇವೆ. ದಿವಂಗತ ಸ್ವಾಮಿ ಪುಣ್ಯವ್ರತಾನಂದಜಿ ಅವರು ಸಂನ್ಯಾಸ ಜೀವನ ನಡೆಸಲು ಜಗದಾತ್ಮಾನಂದಜಿಯವರ ಪ್ರೇರಣೆ ವಿಶೇಷವಾಗಿತ್ತು. ಮಂಗಳೂರಿನಲ್ಲಿದ್ದಾಗ ಸ್ವಾಮಿ ಮುಕ್ತಿದಾನಂದಜಿ ಮತ್ತು ಸ್ವಾಮಿ ಮುಕ್ತಿಪದಾನಂದಜಿಯವರು ಕೂಡ ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಪೂಜ್ಯ ಜಗದಾತ್ಮಾನಂದಜಿಯವರಿಂದ ಪ್ರಭಾವಿತರಾಗಿ ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯುವಂತೆ ಪ್ರೇರಣೆಯನ್ನು ಪಡೆದಿದ್ದರು. ಕೊಳ್ಳೇಗಾಲದಲ್ಲಿ ದಿವ್ಯತ್ರಯರ ಜಯಂತಿಗಳಿಗೆ ಹೋಗಿ ಪೂಜೆ, ಉಪನ್ಯಾಸ ಮತ್ತು ಸತ್ಸಂಗ ನಡೆಸಿ ಬರುತ್ತಿದ್ದರು.

**೨. ತಮ್ಮ ಉಪನ್ಯಾಸಗಳ ಮೂಲಕ:** ಉತ್ತಮ ವಾಗ್ಮಿಗಳು ಆದಂತಹ ಅವರ ಉಪನ್ಯಾಸಗಳಿಂದ ಪ್ರಭಾವಿತರಾಗದವರೇ ಇಲ್ಲ ಎಂದು ಹೇಳಬಹುದು. ಅವರು ಉತ್ತಮ ವಾಗ್ಮಿಗಳಾದ್ದರಿಂದ ಬಹುಶಃ ಜನ್ಮದತ್ತವಾಗಿ ತನ್ನ ತಂದೆಯಿಂದಲೇ ಬಳುವಳಿಯಾಗಿ ಬಂದಂತಹ ಒಂದು ವಾಗ್ಮಿತೆ ಅವರಲ್ಲಿ ಇದ್ದದ್ದು ನಾವು ಸಹಜವಾಗಿ ನೋಡುತ್ತೇವೆ. ಅವರ ಉಪನ್ಯಾಸಗಳು ಚಮತ್ಕಾರದಿಂದ ಕೂಡಿರುತ್ತಿದ್ದವು. ಕರ್ನಾಟಕದಾದ್ಯಂತ ಸಂಚರಿಸಿ ದಿವ್ಯತ್ರಯರ ಜೀವನ ಸಂದೇಶಗಳನ್ನು ಪಸರಿಸಿದ್ದಾರೆ. ಅದರಲ್ಲೂ ಸ್ವಾಮಿ ವಿವೇಕಾನಂದರ ಜೀವನ ಸಂದೇಶವನ್ನು ಯುವ ಮಾನಸದಲ್ಲಿ ಬೇರೂರುವಂತೆ ಮಾಡಿದ್ದಾರೆ. ಅವರು ೧೯೭೮ರ ಜನವರಿಯಲ್ಲಿ ಬೆಂಗಳೂರು ಬಸವನಗುಡಿಯ ಯುವ ಸಮ್ಮೇಳನದಲ್ಲಿ ಮಾಡಿದ ದಿಕ್ಸೂಚಿ ಭಾಷಣವನ್ನು ಇಂದಿಗೂ ಮೆಲುಕು ಹಾಕುವವರು ಇದ್ದಾರೆ. ಒಮ್ಮೆ 'ವಿಶ್ವವಾಣಿ' ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ನೆನೆದುಕೊಂಡಂತೆ, ಅವರು ಹಲವಾರು ಬಾರಿ ಜಗದಾತ್ಮಾನಂದರ ಈ ಭಾಷಣವನ್ನು ಕ್ಯಾಸೆಟ್ ಮುಖಾಂತರ ಕೇಳಿದ್ದಾರೆ. ಅಷ್ಟೇ ಅಲ್ಲ, ಅವರ ಅಜ್ಜನಿಗೋಸ್ಕರ 'ಬದುಕಲು ಕಲಿಯಿರಿ' ಗ್ರಂಥವನ್ನು ದಿನಾ ಓದುವಂತಹ ಅವಕಾಶವಿದ್ದದ್ದರಿಂದ ಅದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು ಎಂದು ಅವರು ನೆನಪಿಸಿಕೊಳ್ಳುತ್ತಿದ್ದರು. ಭಾಷಣ ಮಾಡುವುದು ಅವರ ಸಹಜ ಪ್ರವೃತ್ತಿ ಆಗಿತ್ತು. ಅವರ ಜೀವನದುದ್ದಕ್ಕೂ ಅವರು ಸ್ವಾಮಿ ವಿವೇ ಕಾನಂದ ಸಾಹಿತ್ಯದ ವಿದ್ಯಾರ್ಥಿಯಾಗಿದ್ದರು ಮತ್ತು ಸ್ವಾಮೀಜಿಯ ನಿಷ್ಠಾವಂತ ಬೆಂಬಲಿಗರಾಗಿದ್ದರು. ಅವರು ಸ್ವಾಮಿ ವಿವೇಕಾನಂದರ ಜ್ಯೋತಿಯನ್ನು ಜಗತ್ತಿನ ವಿವಿಧ ಭಾಗಗಳಿಗೆ ಮತ್ತು ವಿಶೇಷವಾಗಿ ಕರ್ನಾಟಕದಾದ್ಯಂತ ಕೊಂಡೊಯ್ದಿದ್ದಾರೆ ಮತ್ತು ತಮ್ಮ ವಾಕ್ಚಾತುರ್ಯದಿಂದ ಸ್ವಾಮೀಜಿಯವರ ಸಂದೇಶವನ್ನು ಹರಡಿದ್ದಾರೆ. ಎಷ್ಟೇ ಹೊತ್ತಾದರೂ ನಿರಂತರ ಉತ್ಸಾಹದಿಂದ ದಿವ್ಯತ್ರಯರ ಬಗ್ಗೆ ಅವರು ಮಾತನಾಡುತ್ತಿದ್ದರು. ವಿಶೇಷವಾಗಿ ಸ್ವಾಮಿ ವಿವೇಕಾನಂದರ ಅಮೃತ ವಾಣಿಯನ್ನು ಅಕ್ಷರಶಃ ಯಥಾವತ್ತಾಗಿ ಪುಟಗಟ್ಟಲೆ ಹೇಳುವುದನ್ನು ಕೇಳಿಸಿ ಕೊಂಡಾಗ ದಂಗು ಬಡಿದಂತಾಗುವುದು. ಅವರು ವಿವೇಕಾನಂದರ ಅಪ್ರತಿಮ ಭಕ್ತರಾಗಿದ್ದರು. ಅವರ ಸಂದೇಶಗಳನ್ನು ತಮ್ಮ ಬಳಿ ಬಂದ ಎಲ್ಲ ಅಧ್ಯಾತ್ಮಿಕ ಜೀವಿಗಳಿಗೂ ಧಾರೆ ಎರೆಯುತ್ತಿದ್ದರು. ಪೂಜ್ಯರು ಮೈಸೂರಿನಲ್ಲಿದ್ದಂತಹ ಸಮಯದಲ್ಲಿಯೇ ಕೊಡಗಿನಲ್ಲಿ ಬೇರೆ ಬೇರೆ ಕಡೆ ಶ್ರೀರಾಮಕೃಷ್ಣರನ್ನು ಕುರಿತು ಹರಿಕಥೆಯನ್ನು ಮಾಡುತ್ತಿದ್ದನ್ನು ಜಂಬರ್ಡಿ ಮಹೇಶ್ ಕುಮಾರ್ ಅವರು ನನ್ನೊಡನೆ ಆಗಾಗ್ಗೆ ಸ್ಮರಿಸಿಕೊಂಡಿದ್ದಾರೆ.

ಸಿರ್ಸಿ ಮತ್ತಿತರ ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಲವಾರು ಕಡೆ ಪೂಜ್ಯರು ಮಾಡುತ್ತಿದ್ದ ಸತ್ಸಂಗವನ್ನು, ಭಾಷಣಗಳನ್ನು ಭೈರಂಬೆಯ ಕೆ. ಎಂ. ಹೆಗಡೆಯವರು ಮತ್ತು ಅವರ ಕುಟುಂಬದವರು ಜ್ಞಾಪಿಸಿಕೊಳ್ಳುತ್ತಾರೆ. ಅದರಲ್ಲೂ, ಪೂಜ್ಯರ ಸತ್ಸಂಗದಿಂದ ಹೆಗಡೆಯವರು ಹೇಗೆ ನಾಸ್ತಿಕತೆಯಿಂದ ಆಸ್ತಿಕರಾದರು ಎಂಬುದನ್ನು, ಹೇಗೆ ದಿವ್ಯತ್ರಯರ ಮಹಿಮೆಯನ್ನು ತಿಳಿಯುವಂತಾಯಿತೆಂದು ಶ್ರದ್ಧೆಯಿಂದ ಸ್ಮರಿಸುತ್ತಾರೆ. ಅಷ್ಟೇ ಅಲ್ಲದೆ ಸ್ವಾಮೀಜಿ ಶಿಲ್ಲಾಂಗ್ ಆಶ್ರಮದಲ್ಲಿದ್ದಾಗ, ಅವರು ಕೊಟ್ಟ ಪ್ರೇರಣೆ 'ಶ್ರೀರಾಮಕೃಷ್ಣ ಪೂಂಥಿ' ಎನ್ನುವ ಬಂಗಾಳಿ ಮಹಾನ್ ಗ್ರಂಥ ಮುಂದೆ ಕನ್ನಡದಲ್ಲಿ 'ಶ್ರೀ ರಾಮಕೃಷ್ಣ ಚರಿತೆ' ಎಂದು ಪ್ರಕಟಣೆಯಾಗಲು ಕಾರಣವಾಯಿತು. ಅದರ ಇಂಗ್ಲಿಷ್ ಅನುವಾದ ಗ್ರಂಥ 'A Portrait of Sri Ramkrishna' ವನ್ನು ಹೆಗಡೆಯವರು ಕನ್ನಡಕ್ಕೆ ತರ್ಜುಮೆ ಮಾಡಿದರು. ಅದನ್ನು ಪ್ರಸಿದ್ಧ ಯಕ್ಷಗಾನ ನಿಪುಣರಾದ ಶ್ರೀ ಮಂಜುನಾಥ ಭಾಗವತರು ಮತ್ತೆ ಪದ್ಯಶೈಲಿಯಲ್ಲಿ ಬರೆದು, ಈ ಬೃಹದ್ ಗ್ರಂಥವು ಮೈಸೂರು ರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿದೆ. ಇದೆಲ್ಲವೂ ಪೂಜ್ಯ ಜಗದಾತ್ಮಾನಂದಜಿಯವರ ಪ್ರೇರಣೆ.

**೩. ತಮ್ಮ ಕಾಯಕದ ಮೂಲಕ:** ಯಾವುದೇ ಕೆಲಸವಾದರೂ ಸರಿ, ಅದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದುದರಿಂದ – ಪೂರ್ವಾಶ್ರಮದಲ್ಲೇ ಶಿಕ್ಷಕರಾದ್ದರಿಂದ, ಊರಿನವರಿಗೆ 'ಕೆದ್ಲಾಯ ಮಾಸ್ಟರ್' ಎಂದೂ, ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವಾರ್ಡನ್ ಜೊತೆಗೆ ಔಷಧ ವಿಭಾಗದ ಉಸ್ತುವಾರಿ ಆಗಿದ್ದುದರಿಂದ 'ಡಾಕ್ಟರ್ ಸ್ವಾಮೀಜಿ' ಎಂದೂ, ಬೇಲೂರು ಮಠದ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಪ್ರಾಂಶುಪಾಲರಾದ್ದರಿಂದ 'ಪ್ರಿನ್ಸಿಪಾಲ್ ಮಹಾರಾಜ್' ಎಂದೂ, ಜನಸಾಮಾನ್ಯರಲ್ಲಿ 'ಬದುಕಲು ಕಲಿಯಿರಿ ಸ್ವಾಮೀಜಿ' ಎಂದೂ ಪ್ರಸಿದ್ಧರಾಗಿದ್ದರು. ಇವರೆಲ್ಲರ ಮೂಲಕ ಅವರು ಜನಸಾಮಾನ್ಯರನ್ನು ಭಗವಾನ್ ಶ್ರೀರಾಮಕೃಷ್ಣರ ಬಳಿ ತರಲು ಪ್ರಯತ್ನಿಸುತ್ತಿದ್ದರು.

**೪. ತಮ್ಮ ಪತ್ರಗಳ ಮೂಲಕ:** ಅವರ ಕನ್ನಡ ಪ್ರಭುತ್ವದಿಂದ ಕೂಡಿತ್ತು. ಅವರು ಬರೆಯುತ್ತಿದ್ದ ಪತ್ರದಲ್ಲಿ ಸ್ಪಷ್ಟತೆ, ನಿಖರತೆ ಇರುತ್ತಿತ್ತು. ಆ ಪತ್ರಗಳ ಮೂಲಕ ಅವರು ಆಧ್ಯಾತ್ಮಿಕ ಸಾಧಕರಲ್ಲಿ ಪ್ರೋತ್ಸಾಹ ಎಡೆಬಿಡದೆ ಸಾಧನೆ ಮಾಡಲು ಪ್ರೇರಣದಾಯಕ ಸಂದೇಶಗಳನ್ನು ಬರೆಯುತ್ತಿದ್ದರು. ಅಂತಹ ನೂರಾರು ಪತ್ರಗಳು ಅನೇಕ ಭಕ್ತರ ಬಳಿರುವುದೇ ಇದಕ್ಕೆ ಸಾಕ್ಷಿ. ಈ ಪತ್ರಗಳ ಮೂಲಕ

ಅವರು ರಾಮಕೃಷ್ಣ ವಿವೇಕಾನಂದರ ಭಾವಧಾರೆಯನ್ನು ಹರಿಯುವಂತೆ ಮಾಡಿರುವುದು ಸ್ವಾಮಿ ಜಗದಾತ್ಮಾನಂದಜಿ ಅವರ ಮತ್ತೊಂದು ವಿಶೇಷತೆ.

**೫. ತಮ್ಮ ಆಧ್ಯಾತ್ಮಿಕ ಬರಹಗಳ ಮುಖಾಂತರ:** ಪೂಜ್ಯ ಜಗದಾತ್ಮಾನಂದಜಿಯವರು ತಮ್ಮ ಮೇರುಕೃತಿ 'ಬದುಕಲು ಕಲಿಯಿರಿ' ಗ್ರಂಥವನ್ನಷ್ಟೇ ಅಲ್ಲದೇ ಬೇರೆ ಬೇರೆ ವೃತ್ತ ಪತ್ರಿಕೆ, ಮಾಸ ಪತ್ರಿಕೆ, ನಿಯತಕಾಲಿಕೆ, ಸ್ಮರಣ ಸಂಚಿಕೆಗಳಿಗೆ ಹಲವಾರು ಲೇಖನಗಳನ್ನು ಬರೆಯುತ್ತಿದ್ದರು. ಇದರ ಮುಖಾಂತರ ರಾಮಕೃಷ್ಣ-ವಿವೇಕಾನಂದ ಸಾಹಿತ್ಯ ಪ್ರಚಾರ ಕಾರ್ಯವನ್ನು ಜನಮಾನಸಕ್ಕೆ ತಲುಪಿಸುವ ಕೆಲಸವನ್ನು ಮಾಡಿರುತ್ತಾರೆ.

**೬. ತಮ್ಮ ಭಜನೆಗಳ ಮೂಲಕ :** ಸ್ವಾಮಿ ಜಗದಾತ್ಮಾನಂದಜಿ ಅವರು ರಾಮಕೃಷ್ಣ ಭಾವಧಾರೆಯನ್ನು ಭಜನೆಗಳ ಮೂಲಕವೂ ಹರಿಸಿದ್ದಾರೆ. ಯಾವುದೇ ಸಭೆ, ಸಮಾರಂಭಗಳಲ್ಲಿ, ಸತ್ಸಂಗ ಗಳಲ್ಲಿ ಯಾವುದೇ ಪುಸ್ತಕಗಳನ್ನು ನೋಡದೆ ಭಾವಪೂರ್ಣವಾಗಿ ಹಾಡುವುದು ಅವರ ಒಂದು ವಿಶೇಷತೆಯಾಗಿತ್ತು. ಅದರಲ್ಲೂ ಪೂಜ್ಯ ಸ್ವಾಮಿ ಹರ್ಷಾನಂದಜಿಯವರೊಡನೆ ಹರಿಕಥಾ ಶೈಲಿಯಲ್ಲಿ ರಾಮಕೃಷ್ಣರ ಜೀವನವನ್ನು ಜುಗಲ್‌ಬಂದಿಯಂತೆ ಪ್ರಸ್ತುತ ಪಡಿಸಿದ್ದನ್ನು ಹಲವಾರು ಭಕ್ತರು ಜ್ಞಾಪಿಸಿಕೊಳ್ಳುತ್ತಾರೆ.

**೭. ತಮ್ಮ ಸಹಾನುಭೂತಿ ಮತ್ತು ಆಧ್ಯಾತ್ಮಿಕ ಸಲಹೆಗಳ ಮೂಲಕ :** ಅನೇಕ ಪುರುಷರು, ಮಹಿಳೆಯರು ಮತ್ತು ಯುವ ಭಕ್ತರು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಚರ್ಚಿಸಲು ಪೂಜ್ಯ ಸ್ವಾಮೀಜಿಯನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದರು. ದೂರದ ಊರುಗಳಿಂದಲೂ ಅವರನ್ನು ಭೇಟಿಯಾಗಲು ಬರುತ್ತಿದ್ದರು. ಉದಾಹರಣೆಗೆ ಲಂಡನ್ನಿನಲ್ಲಿ ವಾಸವಿರುವ ಪ್ರಸಿದ್ಧ ಸಾಹಿತಿ ಭೈರಪ್ಪನವರ ಸುಪುತ್ರರಾದ ಶ್ರೀ ರವಿಶಂಕರ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಅರ್ಚನಾ ಪ್ರತಿಬಾರಿ ಭಾರತಕ್ಕೆ ಬಂದಾಗಲೂ ಪೊನ್ನಂಪೇಟೆ ರಾಮಕೃಷ್ಣ ಶಾರದಾಶ್ರಮಕ್ಕೆ ಭೇಟಿ ಕೊಟ್ಟು ಪರಮ ಪೂಜ್ಯರನ್ನು ಕಂಡು ತಮ್ಮ ಅಧ್ಯಾತ್ಮ ವಿಚಾರಗಳ ವಿನಿಮಯ ಮಾಡಿಕೊಂಡು ಮಾರ್ಗದರ್ಶನ ಪಡೆದು ಆನಂದದಿಂದ ತೆರಳುತ್ತಿದ್ದರು.

ಜಗದಾತ್ಮಾನಂದಜಿಯವರ ಬಳಿಗೆ ಬಂದಂತಹ ಭಕ್ತರು ತಮ್ಮ ಮನದಾಳದ ಯೋಚನೆಗಳನ್ನು ಅವರ ಬಳಿ ಹಂಚಿಕೊಂಡು ಅವರ ಮಾತನ್ನು ಶ್ರದ್ಧೆಯಿಂದ ಆಲಿಸಿ ಮಾರ್ಗದರ್ಶನ ಪಡೆಯುತ್ತಿದ್ದರು. ಅವರ ಸಮಾಲೋಚನೆಯ ಮೂಲಕ ಅನೇಕ ತೊಂದರೆಗೊಳಗಾದ ಕುಟುಂಬಗಳು ಒಗ್ಗೂಡಿದವು. ಅವರವರ ಮಟ್ಟಕ್ಕೆ ಇಳಿದು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವರ ಹೃದಯಕ್ಕೆ ಮುದ ನೀಡುವುದು ಅವರ ವಿಶೇಷತೆಯಾಗಿತ್ತು

ಯಾವುದೇ ವ್ಯಕ್ತಿ ಒಂದು ಒಳ್ಳೆಯ ಕೆಲಸ ಮಾಡಲಿ ಅವರನ್ನು ಗುರುತಿಸಿ ಪ್ರೋತ್ಸಾಹ ನೀಡುತ್ತಿದ್ದುದು ಪರಮಪೂಜ್ಯ ಸ್ವಾಮಿ ಜಗದಾತ್ಮಾನಂದಜಿಯವರ ವಿಶೇಷ ಗುಣ. ಒಮ್ಮೆ ಬೇಲೂರು ಮಠದ ಬೀಳ್ಕೊಡುಗೆ ಸಮಾರಂಭದಲ್ಲಿ ಪರಮ ಪೂಜ್ಯ ಸ್ವಾಮಿ ಭಜನಾನಂದಜಿಯವರು ಹೇಳಿರುವಂತೆ ಇತರರಲ್ಲಿ ಒಳ್ಳೆಯತನವನ್ನು ಮೆಚ್ಚುವ ಶಕ್ತಿ ಜಗದಾತ್ಮಾನಂದಜಿಯವರಲ್ಲಿದೆ ಎಂಬುದು ವಿಶೇಷ ಗುಣ. ಅದರಲ್ಲೂ ಧರ್ಮ ಸಂಸ್ಕೃತಿ ಪ್ರಸಾರದಲ್ಲಿ ತೊಡಗಿಸಿಕೊಂಡವರ, ದೇಶಭಕ್ತಿ ಇರುವವರ ಬಗ್ಗೆ ವಿಶೇಷ ಕಾಳಜಿ. ಅವರಲ್ಲೊಬ್ಬರಾದ ಶ್ರೀ ಚಕ್ರವರ್ತಿ ಸೂಲಿಬೆಲೆ ಅವರ ವಿಶೇಷ ಕೃಪಾಪಾತ್ರರು. ಪೂಜ್ಯರು ಕೊನೆಯ ದಿನಗಳಲ್ಲಿ ಜೆ.ಎಸ್.ಎಸ್. ಆಸ್ಪತ್ರೆಯ ICU ನಲ್ಲಿದ್ದಾಗಲೂ ಆ ಕಾಳಜಿ ಇರುವುದನ್ನು ಕಂಡೆ. ಚಕ್ರವರ್ತಿ ಅಲ್ಲಿಗೆ ಅವರನ್ನು ನೋಡಲು ಬಂದಾಗ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ದೈಹಿಕ ನಿತ್ರಾಣ ಸ್ಥಿತಿಯಲ್ಲೂ ತಮ್ಮ ಸಮಾಧಿಯ ಕೆಲವು ದಿನಗಳ ಮುಂಚೆ ಒಂದು ಪುಸ್ತಕದಲ್ಲಿ 'ಚಕ್ರವರ್ತಿಗೆ ಜಯವಾಗಲಿ' ಎಂದು ಬರೆದಿರುವುದು ಅವರ ಉನ್ನತ ಸ್ಥಿತಿಯನ್ನು ನಮಗೆ ಪರಿಚಯಸುತ್ತದೆ.




**೮. ತಮ್ಮ ಆಧ್ಯಾತ್ಮಿಕ ಸಾಧನೆ ಮೂಲಕ :** ತಮ್ಮ ಆಧ್ಯಾತ್ಮಿಕ ನಿರಂತರ ಸಾಧನೆಯ ಮೂಲಕ ತಮ್ಮ ಜೀವನವನ್ನು ರಾಮಕೃಷ್ಣ ವಿವೇಕಾನಂದರಲ್ಲಿ ಸಮರ್ಪಿಸಿಕೊಂಡು ತಮ್ಮ ಇಳಿ ವಯಸ್ಸಿನಲ್ಲೂ ಕೂಡ ಸಾಧನೆಯ ನಿರಂತರ ಸಾಧನೆ ಮಾಡುವಂತಹ ಅಭ್ಯಾಸವನ್ನವರು ಇಟ್ಟುಕೊಂಡಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅದರಲ್ಲೂ ತಮ್ಮ ಇಳಿವಯಸ್ಸಿನಲ್ಲೂ ಕೂಡ ಹೂಗಳನ್ನು ತಾವೇ ಶೇಖರಿಸಿ ಅವುಗಳನ್ನು ತಮ್ಮ ಕೊಠಡಿಯಲ್ಲಿನ ದೇವದೇವತೆಗಳಿಗೆ

ಅರ್ಪಿಸುತ್ತಿದ್ದು ಒಂದು ವಿಶೇಷತೆ. ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಸಾಧನಾಪರಾಯಣರಾಗಿದ್ದರು. ಶ್ರೀರಾಮಕೃಷ್ಣರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದುದು ವಿಶಿಷ್ಟವಾದದ್ದು. ಗಂಟೆಗಟ್ಟಲೆ ಶ್ರೀರಾಮಕೃಷ್ಣರ ಭಾವಚಿತ್ರದ ಮುಂದೆ ಕುಳಿತು ಜಪಧ್ಯಾನಗಳಲ್ಲಿ ನಿರತರಾಗಿರುತ್ತಿದ್ದರು. ಅದರಲ್ಲೂ ತಮ್ಮ ನಿವೃತ್ತಿ ಜೀವನದಲ್ಲಿ ಸದಾ ಸರ್ವದಾ ಭಗವಂತನ ಚಿಂತನೆಯಲ್ಲಿ ಮತ್ತು ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು.

ಹೀಗೆ ಪೂಜ್ಯ ಸ್ವಾಮಿ ಜಗದಾತ್ಮಾನಂದಜಿ ಅವರು ತಮ್ಮ ಹೆಸರಿಗೆ ತಕ್ಕಂತೆ ಅನ್ವರ್ಥನಾಮವೆಂಬಂತೆ ಜಗದ ಆತ್ಮವೇ ಆಗಿ ಎಲ್ಲರ ಒಳಿತನ್ನು ಬಯಸುವವರಾಗಿದ್ದರು. ಎಲ್ಲರಿಗೂ ಒಳಿತಾಗಲಿ, ಶುಭವಾಗಲಿ ಎಂಬುದು ಅವರಿಗೆ ಮಂತ್ರದಂತೆ ಇತ್ತು. ಅವರು ಮರಣಶಯ್ಯೆಯಲ್ಲಿ ಅಂದರೆ ಆಸ್ಪತ್ರೆಯ ಐಸಿಯುನಲ್ಲಿದ್ದಾಗಲೂ ಎಲ್ಲರಿಗೂ ಒಳಿತಾಗಲಿ ಎಂಬುದಾಗಿ ಬರೆದಿದ್ದು, ಅವರ ಸಹಜ ಸ್ವಭಾವವನ್ನು, ರಾಮಕೃಷ್ಣ-ವಿವೇಕಾನಂದ ಭಾವಾಂದೋಲನದ ಸೂತ್ರ 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬುದನ್ನು ಪ್ರತಿಪಾದಿಸುತ್ತದೆ. ಹೀಗೆ ಬಹುಮುಖ ವ್ಯಕ್ತಿತ್ವವುಳ್ಳ ಸ್ವಾಮಿ ಜಗದಾತ್ಮಾನಂದಜಿಯವರು ಎಲ್ಲ ಮಾಧ್ಯಮಗಳ ಮೂಲಕ – ಸತ್ಸಂಗದ ಮೂಲಕ, ತಮ್ಮ ಭಾಷಣಗಳ ಮೂಲಕ, ತಮ್ಮ ಕಾಯಕದ ಮೂಲಕ, ತಮ್ಮ ಬರವಣಿಗೆಗಳ ಮೂಲಕ, ತಮ್ಮ ಹಾಡಿನ ಮೂಲಕ, ತಮ್ಮ ಪತ್ರಗಳ ಮೂಲಕ, ತಮ್ಮ ಸಹಾನುಭೂತಿ ಮತ್ತು ಆಧ್ಯಾತ್ಮಿಕ ಸಲಹೆಗಳ ಮೂಲಕ, ತಮ್ಮ ಆಧ್ಯಾತ್ಮಿಕ ಜೀವನದ ಮೂಲಕ, ಶ್ರೀರಾಮಕೃಷ್ಣರ ಶ್ರೀಮಾತೆ ಶಾರದಾದೇವಿಯವರ, ಸ್ವಾಮಿ ವಿವೇಕಾನಂದರ ಭಾವಧಾರೆಯನ್ನು ಎಲ್ಲ ಕಡೆ ಪಸರಿಸುವಂತೆ ಮಾಡಿದ್ದಾರೆ. ಅವರು ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಕೊಟ್ಟ ದೇಣಿಗೆಯನ್ನು ಸ್ಮರಿಸುತ್ತಾ ಅವರಿಗೆ ಈ ನಮನಗಳನ್ನು ಸಮರ್ಪಿಸುತ್ತೇನೆ. ✽

## ಯುವಚೇತನ



## 'ಪ್ರೀತಿಯ ಫಲ ಪ್ರೀತಿಯೊಂದೆ'

"ನನಗೆ ದ್ರವ್ಯ ಬೇಡ, ಆರೋಗ್ಯ ಬೇಡ, ನನಗೆ ಸೌಂದರ್ಯ ಬೇಡ, ಬುದ್ಧಿ ಬೇಡ; ಪ್ರಪಂಚದಲ್ಲಿರುವ ಹಲವು ಪಾಪಗಳ ಮಧ್ಯೆ ನಾನು ಪದೇ ಪದೇ ಜನಿಸಿದರೂ ಗೊಣಗಾಡುವುದಿಲ್ಲ. ನಾನು ನಿನ್ನನ್ನು ಪ್ರೀತಿಗೋಸುಗವಾಗಿ ಪ್ರೀತಿಸುತ್ತೇನೆ." ಈ ಹಾಡುಗಳಲ್ಲಿ ಹೊರದೋರುವ ಪ್ರೇಮಾಧಿಕ್ಯವಿದು; ಇದು ಅತಿ ತೀವ್ರವಾದುದು. ಅತ್ಯುತ್ತಮವಾದ ಅತಿ ಪ್ರಬಲವಾಗಿರುವ ಆಕರ್ಷಣೀಯವಾಗಿರುವ ಮಾನವೀಯ ಪ್ರೇಮವೇ ಸ್ತ್ರೀಪುರುಷರ ಪರಸ್ಪರಾನುರಾಗ ; ಆದಕಾರಣವೇ ಇಂತಹ ಭವ್ಯವಾದ ಭಕ್ತಿಯನ್ನು ವಿವರಿಸುವುದಕ್ಕೆ ಈ ಬಗೆಯ ಭಾಷೆಯನ್ನು ಉಪಯೋಗಿಸುವರು. ಈ ಮಾನವೀಯ ಪ್ರೀತಿಯ ಉನ್ಮಾದ, ಭಕ್ತರ ದೈವೋನ್ಮಾದದ ಅತಿ ಕ್ಷೀಣ ಮರುಧ್ವನಿ ಮಾತ್ರ. ನಿಜವಾದ ಈಶ್ವರಾನುರಾಗಿಗಳು ಭಗವದ್ಭಕ್ತಿ ಎಂಬ ಅಮೃತಪಾನದಿಂದ ಉನ್ಮತ್ತರಾಗಬಯಸುವರು, ಈಶ್ವರಾನುರಾಗಿಗಳಾದ ಭಕ್ತರಾಗಬಯಸುವರು. ಪ್ರತಿಯೊಂದು ಧರ್ಮದ ಸಂತಮಹಾಪುರುಷರೂ ತಮ್ಮ ಇಡೀ ಸಾಧನೆಯ ಅಮೃತವನ್ನು ಧಾರೆ ಎರೆದು ಯಾವ ಫಲಾಪೇಕ್ಷೆಯನ್ನೂ ಇಚ್ಛಿಸದೆ, ಕೇವಲ ಈಶ್ವರಾನುರಾಗ ಒಂದನ್ನೇ ತಮ್ಮ ಜೀವನದ ಚರಮ ಗುರಿಯಾಗಿ ಮಾಡಿಕೊಂಡು, ಜೀವನದ ಆಕಾಂಕ್ಷೆಯ ಸಾರವನ್ನು ಸುರಿದು, ಅಣಿಮಾಡಿರುವ ಪ್ರೇಮಾಮೃತ ಕಲಶವನ್ನು ಹೀರಿ ಮೈಮರೆಯಲೆತ್ನಿಸುವರು. ಪ್ರೀತಿಯ ಫಲ ಪ್ರೀತಿಯೊಂದೆ. ಇದು ಎಂತಹ ಪ್ರತಿಫಲ! ನಮ್ಮ ಜೀವನದ ದುಃಖವನ್ನೆಲ್ಲ ಮೈಮರೆಸುವುದು ಇದೊಂದೇ; ಭವ ರೋಗವನ್ನು ನಾಶಮಾಡುವ ಪಾನೀಯ ಇದೊಂದೇ. ಇದರಿಂದ ಮಾನವ ದೈವೋನ್ಮತ್ತನಾಗುವನು, ತಾನು ಮನುಷ್ಯನೆಂಬುದನ್ನು ಮರೆಯುವನು.

ಕೊನೆಗೆ, ಎಲ್ಲಾ ಬಗೆಯ ಸಿದ್ಧಾಂತಗಳು ಪರಿಪೂರ್ಣ ಏಕತೆಯಲ್ಲಿ ಒಂದಾಗುವುವು. ನಾವು ಯಾವಾಗಲೂ ದ್ವೈತಿಗಳಂತೆ ಪ್ರಾರಂಭಿಸುವೆವು. ದೇವರು ಬೇರೆ, ಮಾನವ ಬೇರೆ. ಅನುರಾಗ ಅವರಿಬ್ಬರ ನಡುವೆ ಬರುವುದು; ಮಾನವ ದೇವರೆಡೆಗೆ ನಡೆಯುವನು, ದೇವರು ಮಾನವನೆಡೆಗೆ ಬಂದಂತೆ ತೋರುವುದು. ಮಾನವನು ತಂದೆಯಂತೆ ತಾಯಿಯಂತೆ ಸ್ನೇಹಿತನಂತೆ ಪ್ರಣಯಿಯಂತೆ ಹಲವು ಮಾನವೀಯ ಸಂಬಂಧಗಳ ಮೂಲಕ ದೇವರನ್ನು ಪ್ರೀತಿಸಿ, ಕೊನೆಗೆ ತನ್ನ ಆರಾಧನೆಯ ಇಷ್ಟದೈವದಲ್ಲಿ ತನ್ಮಯನಾದಾಗ ಪರಾಕಾಷ್ಠೆಯನ್ನು ಮುಟ್ಟುವನು. "ನಾನೇ ನೀನು, ನೀನೇ ನಾನು, ನಿನ್ನ ಪೂಜೆಯೇ ನನ್ನ ಪೂಜೆ, ನನ್ನ ಪೂಜೆಯೇ ನಿನ್ನ ಪೂಜೆ." ಇಲ್ಲಿ ಮಾನವನು ತಾನು ಪ್ರಾರಂಭಿಸಿದುದರ ಅಂತಿಮಗುರಿ ಲಭಿಸುವುದು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು. ೧೪–೧೫)*